ಸಲೀಮ್‌ನನ್ನು ಹೊರಗೆ ಕರೆದೊಯ್ದರು.

ಸುಮಾರು ಐದು ನಿಮಿಷ ಕಳೆದವು. ಹೊರಗೆ ಏನು ನಡೆಯುತ್ತಿದೆಯೆಂದು ಗೊತ್ತಾಗಲಿಲ್ಲ. ಧಡ್ಡನೆ ನೆಲದ ಮೇಲೆ ಬಿದ್ದ ಸದ್ದು. ಸಣ್ಣ ನರಳುವಿಕೆ ಕೇಳಿಬಂತು.

ಎದ್ದು ದುಗುಡದಿಂದ ಹೊರಬಂದಳು. ಬಾಗಿಲಲ್ಲಿ ನಿಂತ ಪೊಲೀಸ್ ಆಕೆಯನ್ನು ಅಡ್ಡಗಟ್ಟಿದ. ವರಂಡಾದಲ್ಲಿ ಮಫ್ತಿಯಲ್ಲಿದ್ದ ಅಧಿಕಾರಿ ಎದುರಿಗೆ ಸಲೀಮ್ ನಿಂತಿದ್ದ. ಅವನ ಮುಖದ ತುಂಬೆಲ್ಲಾ ರಕ್ತ. ಮೂಗಿನಿಂದ ಇನ್ನೂ ರಕ್ತ ಒಸರುತ್ತಿತ್ತು. "ಐಯಾಂ ಜರ್ನಲಿಸ್ಟ್" ಸಲೀಮ್ ದನಿಯಲ್ಲಿ ದುಃಖದ ಎಳೆ. ಜಾಡಿಸಿ ಸಲೀಮ್ ಮುಖದ ಮೇಲೆ ಗುದ್ದಿದ ಅಧಿಕಾರಿ. "ಯುನಿವರ್ಸಿಟಿಯಲ್ಲಿ ನಿನಗೇನು ಕೆಲಸ. ನಿಜ ಹೇಳು."

"ನನಗಾಗಿ, ನನಗಾಗಿ ಬಂದಿದ್ದಾನೆ" ಭಯದಿಂದ ಚೀರಿದಳು ಮನೋರಮ. ಆಕೆಯ ಕಡೆ ತೀಕ್ಷ್ಣವಾಗಿ ನೋಡಿದ ಅಧಿಕಾರಿ. ಸಲೀಮನ ಚೀಲದೊಳಗಿಂದ ಹಾಳೆಗಳು, ಡೈರಿಗಳು, ಕವನ ಸಂಕಲನಗಳೆಲ್ಲಾ ನೆಲದ ಮೇಲೆ ಬಿದ್ದವು. ಹಾಳೆಗಳು ಗಾಳಿಗೆ ಹಾರುತ್ತಿದ್ದವು. ಕೆಲವು ಹಾಳೆಗಳಲ್ಲಿ ಅವನು ಬರೆದಿದ್ದ ಕವಿತೆಗಳಿದ್ದವು. ಅವುಗಳನ್ನು ಶ್ರದ್ಧೆಯಿಂದ ಓದಿದ ಅಧಿಕಾರಿ. ಅವನಿಗೆ ಅರ್ಥವಾಗಲಿಲ್ಲ. ಎಲ್ಲವನ್ನೂ ಕರವಸ್ತ್ರದಲ್ಲಿ ಗಂಟು ಕಟ್ಟಿದ ಪೊಲೀಸ್‌ಪೇದೆ.

"ಸ್ಟೇಶನ್‌ಗೆ ಬಂದು ನಿನ್ನ ವಿವರಗಳನ್ನು, ಅಡ್ರೆಸ್, ಸ್ಟೇಟ್‌ಮೆಂಟ್ ಕೊಟ್ಟು ಹೋಗು" ಎಂದು ಜೀಪಿನ ಕಡೆ ನಡೆದ ಅಧಿಕಾರಿ. ತುಂಬಾ ಹೊತ್ತಿನಿಂದ ಈ ಪ್ರಹಸನವನ್ನು ನೋಡುತ್ತಿದ್ದ ವೃದ್ಧಪ್ರೊಫೆಸರ್, "ಇದೆಲ್ಲಾ ಏನು? ಯಾರವನು? ಏಕೆ ಟಾರ್ಚರ್ ಮಾಡುತ್ತಿದ್ದಾರೆ?" ಕೊಂಚ ಆತಂಕದಿಂದ ಕೇಳಿದ.

"ವೇರೀಜ್ ಟಾರ್ಚರ್? ಜಸ್ಟ್ ಎನ್‌ಕ್ವಯರಿ ಮಾಡುತ್ತಿದ್ದೇವೆ" ಎನ್ನುತ್ತಾ ಅಧಿಕಾರಿ ಹೊರಟುಹೋದ. ಜೊತೆಗೆ ಪೊಲೀಸರು ಕೂಡಾ. ಸಲೀಮ್ ಭುಜದ ಮೇಲೆ ಕೈಹಾಕಿ ಮನೋರಮ, "ನಾನಿನ್ನು ಹೊರಡುತ್ತೇನೆ" ಎಂದಳು ದಿಗಿಲಿನಿಂದ. ಸ್ವಲ್ಪ ಹೊತ್ತು ಇದ್ದು ಹೋಗೆಂದು ಕೇಳಬೇಕೆನಿಸಿತು ಸಲೀಮನಿಗೆ. ಒಲ್ಲದ ಮನಸ್ಸಿನಿಂದಲೇ 'ಸರಿ' ಎಂದ. ಇಬ್ಬರೂ ಬೇರೆ ಬೇರೆ ದಾರಿಗಳಲ್ಲಿ ಹೆಜ್ಜೆ ಹಾಕಿದರು. ತುಂಬಾ ಸಲ ಹಿಂದಕ್ಕೆ ತಿರುಗಿ ನೋಡುತ್ತಾ ನಡೆದಳು ಮನೋರಮ.

ಸಣ್ಣದಾಗಿ ಬೀಳುತ್ತಿದ್ದ ಮಳೆ ಒಮ್ಮೇಲೇ ಜೋರಾಯಿತು. ಮರದ ಕೆಳಕ್ಕೊ, ಪಕ್ಕದಲ್ಲಿದ್ದ ಬಿಲ್ಡಿಂಗ್ ಕಡೆಗೋ ಹೋಗಲು ಪ್ರಯತ್ನಿಸಲಿಲ್ಲ ಸಲೀಮ್. ರಸ್ತೆಯ ಮೇಲೆ ನೀರು ಕಾಲುವೆಯಂತೆ ಹರಿಯತೊಡಗಿತು. ಎಲೆಗಳು, ಸಿಗರೇಟ್ ಪ್ಯಾಕೆಟ್‌ಗಳು, ಹಾಳೆಗಳು ನೀರಲ್ಲಿ ತೇಲುತ್ತಾ ಸಲೀಮ್ ಕಾಲುಗಳನ್ನು ಮುತ್ತಿದವು. ರಸ್ತೆಯೆಲ್ಲಾ ಖಾಲಿಯಾಗಿತ್ತು. ಸಲೀಮನಿಗೆ ಶಬ್ದಗಳು ಕೇಳಿಸುತ್ತಿರಲಿಲ್ಲ.

★★★

ಎರಡು ವಾರಗಳಿಂದ ಧೋ ಎಂದು ಸುರಿಯುತ್ತಿದ್ದ ಮಳೆ. ಯುನಿವರ್ಸಿಟಿಯೆಲ್ಲಾ ಒದ್ದೆಯಾಗಿತ್ತು. ಮಳೆಯಲ್ಲಿ ತೊಯ್ದ ರಸ್ತೆಯ ಮೇಲೆ ಉದುರಿದ ಎಲೆಗಳು ರಾಶಿ ರಾಶಿಯಾಗಿ ಬಿದ್ದಿದ್ದವು. ಆಗಸ್ಟ್ ತಿಂಗಳಲ್ಲೇ ಚಳಿಗಾಲ ಶುರುವಾದಂತಿತ್ತು. ಕ್ಯಾಂಟೀನ್ ಮುಂದೆ ಕುರ್ಚಿಗಳು ಮಳೆಯಲ್ಲಿ ಅನಾಥವಾಗಿದ್ದವು. ಜನ ಇರಲಿಲ್ಲ. ತೊಯ್ದ ಗೋಡೆಗಳಿಂದ ವಿಚಿತ್ರ ವಾಸನೆ ಬರುತ್ತಿತ್ತು. ಟೀ ಕಪ್ ಹಿಡಿದು ಹೊರಗೆ ಬಂದು ನಿಂತ ಸಲೀಮ್. ಅವನಿಗೆ ಮನೋರಮಳನ್ನು ನೋಡಬೇಕೆನಿಸಿತು. ಹಾಸ್ಟೆಲ್ ಬಳಿ ಸ್ಲಿಪ್ ಕೊಟ್ಟು ಬಂದಿದ್ದ.